**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 3786/2024**

ಪಿರ್ಯಾದುದಾರರು : ವಿರುದ್ಧ ಆರೋಪಿತರು:

ಚನ್ನಗಿರಿ ಪೊಲೀಸ್ ಠಾಣೆ

ಎ1. ಉಮೇಶ ಬಿನ್ ಅಂದಪ್ಪ ಪಾಟೀಲ್
ವಯಸ್ಸುಃ 35 ವರ್ಷ
ವಾಸಃ ಕುಕ್ಕನಪಲ್ಲಿ ಗ್ರಾಮ, ಕೊಪ್ಪಳ ತಾಲ್ಲುಕು ಮತ್ತು ಜಿಲ್ಲೆ

**ದೋಷಾರೋಪಣೆ**

**ಶ್ರೀಮತಿ ಮಹಾಲಕ್ಷ್ಮೀ ಜಿ 1**ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿಃ 09-09-2021 ರಂದು ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಸರಹದ್ದಿನ ಬೀರೂರು ಸಮ್ಮಸಗಿ ಎಸ್ ಹೆಚ್ 76 ರಸ್ತೆಯಲ್ಲಿ 3ನೇ ಆರೋಪಿಯ ಮಾಲೀಕತ್ವದ ಎಪಿ-39-ಡಿಬಿ/ 1543 ನೇ ಬೈಕಿನಲ್ಲಿ ಮೃತ 4ನೇ ಆರೋಪಿಯು ತನ್ನ ಜೊತೆಗೆ ಮೃತ ಮಂಜುನಾಥ ಮತ್ತು ದೇವರಾಜ ಇವರೊಂದಿಗೆ ಚನ್ನಗಿರಿಗೆ ಬಂದು ಮಲ್ಲೆಶ್ವರ ಗ್ರಾಮಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ರಾಜಗೊಂಡನಹಳ್ಳಿ ಗ್ರಾಮದ ಬಳಿ ಸಂಜೆ 7.00 ಗಂಟೆ ಸಮಯದಲ್ಲಿ ಪಾಂಡೋಮಟ್ಟಿ ಕಡೆಯಿಂದ ಬಂದ 1ನೇ ಆರೋಪಿಯಾದ ನೀನು 2ನೇ ಅರೋಪಿಯ ಮಾಲೀಕತ್ವದ ಕೆಎ-387/ಬಿ-0854 ನೇ ಮಹೇಂದ್ರ ಬುಲೆರೋ ಪಿಕಪ್ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದರಿಂದ ನಿನ್ನ ನಿಯಂತ್ರಣ ತಪ್ಪಿದ ವಾಹನ ರಸ್ತೆಯ ಎಡಬದಿಯಲ್ಲಿ ಮೃತ 4ನೇ ಅರೋಪಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಬೈಕಿಗೆ ಎದುರಿನಿಂದ ಡಿಕ್ಕಿಪಡಿಸಿ ಸದರಿ ವಾಹನವನ್ನು ಅಪಘಾತವಾದ ಸ್ಥಳದಲ್ಲಿ ಬಿಟ್ಟು ಹೋಗಿರುತ್ತೀರ ಆ ಮೂಲಕ ಭಾ.ದಂ.ಸಂ.ಕಲಂ 279 ಮತ್ತು 187 ಐ ಎಂ ವಿ ಕಾಯ್ದೆ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಅರೋಪಿಯಾದ ನೀನು ತನ್ನವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ

ಮಾಡಿಕೊಂಡು ಬಂದು  ಎದುರಿನಿಂದ ಬರುತ್ತಿದ್ದ 4ನೇ ಅರೋಪಿಯ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ 4ನೇ ಅರೇಪಿಗೆ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತ ಸ್ರಾವವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ತೀವ್ರ ಸ್ವರೂಪದ ಗಾಯಗೊಳಗಾದ ಮಂಜುನಾಥ ಮತ್ತು ದೇವರಾಜ್ ಇವರನ್ನ ಚಿಕಿತ್ಸೆಗೆ ಚನ್ನಗಿರಿಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯೆದಲ್ಲಿ ಮಂಜುನಾಥ ಎನ್ನುವವರು ಮೃತಪಟ್ಟಿದ್ದು, ದೇವರಾಜ ಇವನಿಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ  ಕರೆದುಕೊಂಡು ಹೋಗುವ ಮಾರ್ಗ ಮಧ್ಯೆದಲ್ಲಿ ಮೃತಪಟ್ಟಿರುತ್ತಾನೆ.  ಆ  ಮೂಲಕ  ಭಾ.ದಂ.ಸಂ.ಕಲಂ 304(ಎ) ಅಡಿಯಲ್ಲಿ ಈ ನ್ಯಾಯಾಲಯದ  ಸಂಜ್ಞಾನದೊಳಗೆ  ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ  ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಅರೋಪಿಯಾದ ನೀನಗೆ ವಾಹನ ಚಾಲನೆ ಮಾಡಲು ಪರವಾನಿಗೆ ಇಲ್ಲದೆ ಇದ್ದರು ಸಹ 3ನೇ ಅರೇಪಿಯ ಮಾಲೀಕತ್ವದ ಬೈಕಿಗೆ ಡಿಕ್ಕಿಪಡಿಸಿ 4ನೇ ಆರೋಪಿ , ದೇವರಾಜ ಮತ್ತು ಮಂಜುನಾಥ ಇವರ ಸಾವಿಗೆ ಕಾರಣನಾದ್ದರಿಂದ ಆ ಮೂಲಕ   181 ಐ ಎಂ ವಿ ಕಾಯ್ದೆಯಡಿಯಲ್ಲಿ ಈ ನ್ಯಾಯಾಲಯದ  ಸಂಜ್ಞಾನದೊಳಗೆ  ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 06-04-2026

**(ಶ್ರೀಮತಿ ಮಹಾಲಕ್ಷ್ಮೀ ಜಿ )**

**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ:93786/2024**

**1. ಕರ್ನಾಟಕ ಸರ್ಕಾರ (ಚನ್ನಗಿರಿ  ಪಿ.ಎಸ್ )**

**ವಿರುದ್ಧ**

ಎ1. ಉಮೇಶ ಬಿನ್ ಅಂದಪ್ಪ ಪಾಟೀಲ್
ವಯಸ್ಸುಃ 35 ವರ್ಷ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 06-04-2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 06-04-2026

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**